ಬಂದದ್ದು ನೋಡಿ ಆ ರಾತ್ರೆ ಡಾ. ರಾಯಪ್ಪನವರು ಕುಪ್ಪಣ್ಣಯ್ಯನವರಿಗೆ ಪೋನು ಮಾಡಿ, 'ನಮ್ಮೂರಲ್ಲಿ ಹುಚ್ಚುನಾಯಿಗಳ ಕಾಟ ವಿಪರೀತವಾದ ಹಾಗೆ ಇದೆಯಲ್ಲ? ನಮ್ಮ ಪಂಚಾಯತ್‌ನವರು ಬೀದಿನಾಯಿಗಳನ್ನು ಹಿಡಿದು ಕೊಲ್ಲಿಸುವುದು ಮತ್ತು ಸಾಕು ನಾಯಿಗಳಿಗೆ ಆ್ಯಂಟಿ ರೇಬಿಸ್ ಕೊಡಿಸಲು ನೀವು ಒಂದು ಮನವಿ ಅರ್ಪಿಸಬೇಕು' ಎಂದರು. ಕುಪ್ಪಣ್ಣಯ್ಯನವರಿಗೆ ಒಳಗೊಳಗೆ ನಗು ಬಂತು. ಆದರೆ ಅವರಿಗೆ ವೀರಪ್ಪಗೌಡರ ರಹಸ್ಯ ಕಾರ್ಯಾಚರಣೆಯನ್ನು ತಾನೇಕೆ ಡಾ. ರಾಯಪ್ಪನವರಿಗೆ ಹೇಳಬೇಕು? ಎಂದು ಅನಿಸಿ, 'ಆಯ್ತು ಸ್ವಾಮಿ' ಎಂದರು.

ಮರುದಿನ ಬೆಳಿಗ್ಗೆ ಹೋಟೆಲಿಗೆ ಹೊರಡುವ ಮುನ್ನ ಕುಪ್ಪಣ್ಣಯ್ಯನವರು ವೀರಪ್ಪಗೌಡರಿಗೆ ಫೋನುಮಾಡಿ ರಾಯಪ್ಪ ಡಾಕ್ಟ್ರು ಹೇಳಿದ ವಿಚಾರವನ್ನು ಮುಂದಿಟ್ಟರು. ವೀರಪ್ಪಗೌಡರಿಗೆ ಖುಶಿಯಾಗಿ, 'ಹೌದಾ ಹೌದಾ?' ಎಂದು ಎರೆಡರಡು ಬಾರಿ ಹೇಳಿ, 'ನಾನೊಂದು ಅರ್ಜಿ ತಯಾರಿ ಮಾಡಿ ಒಂದು ನೂರು ಜನರ ಸಹಿ ಸಂಗ್ರಹಿಸುತ್ತೇನೆ. 'ನೀವೂ ಸಹಿ ಹಾಕಬೇಕು' ಎಂದದ್ದಲ್ಲದೆ ನಮ್ಮ ಪಂಚಾಯತ್ ಅಧ್ಯಕ್ಷರಿಗೆ ಮನವಿ ಅರ್ಪಿಸುವಾಗ 'ನೀವೂ ಇರಬೇಕು' ಎಂದರು. ಕುಪ್ಪಣ್ಣಯ್ಯನಿಗೆ ಅದು ಇಷ್ಟವಾಗಲಿಲ್ಲ. 'ಬರುವುದಿಲ್ಲ' ಅಂದರೆ ಗೌಡರಿಗೂ ದಾಸುಭಟ್ರಗೂ ನೋವಾಗುತ್ತದೆ. ಅವರ ಜೊತೆ ಹೋದರೆ ತನಗೂ ನೈತಿಕತೆ ಇಲ್ಲ ಎಂದು ಕ್ಷಣ ಯೋಚಿಸಿದ ಅವರು ಇದು 'ಪ್ಲಾಸಿಬೋ' ಯೋಜನೆಯಾದರೂ, ಊರಮಂದಿಗೆ ಉಪಕಾರವಾಗುವ ಯೋಜನೆ ಎಂದುಕೊಂಡು, 'ಸರಿ ಗೌಡರೆ, ಬರುತ್ತೇನೆ' ಎಂದರು.

ವಾರದ ಮೇಲೆ ವೀರಪ್ಪಗೌಡರ ನೇತೃತ್ವದಲ್ಲಿ ಹದಿನೇಳು ಮಂದಿ ಪಂಚಾಯತ್ ಕಚೇರಿಗೆ ನಡೆದರು. ಆ ನಿಯೋಗದ ಜೊತೆ ಕುಪ್ಪಣ್ಣಯ್ಯನೂ ದಾಸುಭಟ್ರೂ ಇದ್ದರು. ವೀರಪ್ಪಗೌಡರ ಮನವಿ ಸ್ವೀಕರಿಸಿದ ಪಂಚಾಯತ್ ಅಧ್ಯಕ್ಷ ಭಾಸ್ಕರ ಹೆಗ್ಡೆ, 'ಮನವಿಯನ್ನು ನಮಗೆ ಯಾಕೆ ನೀಡುತ್ತೀರಿ? ತಾಲೂಕು ಪಂಚಾಯತಿಗೆ ಕೊಡಿ, ಅಥವಾ ಜಿಲ್ಲಾ ಪಂಚಾಯತಿಗೆ ಕೊಡಿ. ಇಲ್ಲವೇ ತಾಲೂಕು ವೈದ್ಯಾಧಿಕಾರಿಗಳಿಗೆ ಕೊಡಿ, ಅದು ಬೇಡ ಅಂತ ಇದ್ದರೆ ಶಾಸಕರಿಗೆ ಕೊಡಿ. ಶಾಸಕರಿಗೆ ಇದನ್ನು ಹೇಗೆ ಮಾಡಿಸಬೇಕು? ಯಾರಿಗೆ ಹೇಳಬೇಕು ಎನ್ನುವುದೆಲ್ಲ ಗೊತ್ತಿರುತ್ತದೆ' ಎಂದು ಆ ಮನವಿಯನ್ನು ಮೆಲ್ಲಗೆ ಮಡಚಿ, ವೀರಪ್ಪಗೌಡರ ಕೈಯಲ್ಲೂ ಕೊಡದೆ, ತನ್ನ ಇದಿರಿನ ಟೇಬಲ್ಲಿನ ಬದಿಯಲ್ಲಿ ಇಟ್ಟರು. ಫ್ಯಾನಿನ ಗಾಳಿ ಬೀಸುತ್ತಿದ್ದುದರಿಂದ ಅದು ಮೇಜಿನಿಂದ ಕೆಳಗೆ ಬಿತ್ತು. ವೀರಪ್ಪಗೌಡರಿಗೆ ಸಿಟ್ಟು ಬಂತು. 'ನೀವು ಏನೂ ಮಾಡುವುದು ಬೇಡ. ಆದರೆ ಪಂಚಾಯತ್ ಮೀಟಿಂಗ್‌ನಲ್ಲಿ ಒಂದು ನಿರ್ಣಯ ಮಾಡಿ, ಅದನ್ನು ನೀವೇ ಹೇಳಿದ ಮಂದಿಗೆಲ್ಲ ಫಾರ್ವರ್ಡ್ ಮಾಡಬಹುದಲ್ಲ?' ಎಂದು ಅಬ್ಬರಿಸಿದರು. ಭಾಸ್ಕರ ಹೆಗ್ಡೆಯೂ ಕೆರಳಿದ. 'ನೀನಾರಯ್ಯ ನನಗೆ ಆದೇಶ ಮಾಡಲು? ಡಿ.ಸಿಯೋ ಏ.ಸಿ.ಯೋ? ಖುಶಿ ಬಂದ ಹಾಗೆ ನಿರ್ಣಯಿಸಲಿಕ್ಕೆ ಚುನಾಯಿತರಾದ ನಮಗೂ ಅಧಿಕಾರ ಇಲ್ಲ. ಮತ್ತಲ್ಲವೇ ನೀವು? ತಾಕತ್ತಿದ್ದರೆ ಮುಂದೆ ಮೂರು ತಿಂಗಳಲ್ಲಿ ಗೆದ್ದು ಅಧಿಕಾರವಹಿಸಿ ನಿರ್ಣಯ ಮಾಡು' ಎಂದ ಏಕವಚನದಲ್ಲಿ ಸ್ವರ ಏರಿಸಿ. 'ಆಯ್ತು ಹಾಗೇ ಮಾಡ್ತೇವೆ' ಎಂದ ವೀರಪ್ಪಗೌಡರು, 'ಬನ್ನಿ ಕುಪ್ಪಣ್ಣಯ್ಯನವರೇ ಇಂಥ ಮೂರ್ಖ ಅಧ್ಯಕ್ಷನಲ್ಲಿ ಮಾತನಾಡಿ ಪ್ರಯೋಜನವಿಲ್ಲ' ಎಂದು ಹೊರನಡೆದರು.

ಅವರ ಜೊತೆ ಬಂದವರೆಲ್ಲರೂ ನೇರವಾಗಿ ದುರ್ಗಾಭವನಕ್ಕೆ ಬಂದರು. ಎಲ್ಲರನ್ನೂ ಉಪಾಹಾರದ ಟೇಬಲ್ಲಿನ ಹಿಂದೆ ಕೂರಿಸಿದ ವೀರಪ್ಪಗೌಡರು ಅಲ್ಲೇ ಇದ್ದ ಕುರ್ಚಿಯನ್ನು ಕುಪ್ಪಣ್ಣಯ್ಯನವರ ಗಲ್ಲಾಪೆಟ್ಟಿಗೆಯ ಇದಿರಿಗೆ ಎಳೆದು ಕುಳಿತುಕೊಂಡು, 'ಮೊದಲು ಇವರಿಗೆ ಬೇಕಾದದ್ದನ್ನೆಲ್ಲ ಕೊಡಿರಿ. ಆಮೇಲೆ ನಾವು ಶಾಸಕರನ್ನು ಯಾವಾಗ ನೋಡಿ ಬರುವುದೆಂದು ನಿಶ್ಚಯಿಸೋಣ' ಎಂದರು. ಶಾಸಕರು ಯಾವಾಗ ತಮ್ಮ ಕ್ಷೇತ್ರದ ಕಚೇರಿಯಲ್ಲಿ ಇರುತ್ತಾರೆ ಎಂದು ವಿಚಾರಿಸಿ ದಿನ ನಿಶ್ಚಯಿಸುವುದೆಂದು ತೀರ್ಮಾನಿಸಲಾಯಿತು. ಅದೇ ರೀತಿ, 'ಈ ದಿನ ಬಂದವರಷ್ಟೇ ಅಲ್ಲಾ, ಇನ್ನೂ ಹತ್ತು ಮಂದಿ ಬಂದರೆ ಅವರನ್ನೆಲ್ಲ ತಾನು ಕಾರಿನಲ್ಲಿ ಕರಕೊಂಡು ಹೋಗುವುದಾಗಿ' ನಿಯೋಗದ ಸದಸ್ಯರಿಗೆ ಗೌಡರು ತಿಳಿಸಿದರು.

ನಾಲ್ಕು ದಿನಗಳ ಮೇಲೆ ನಾಲ್ಕು ಕಾರುಗಳಲ್ಲಿ ರಾಂಪುರದ ಶಾಸಕ ಬೋಳ ತಿಮ್ಮಪ್ಪನವರನ್ನು ಅವರ ಕಚೇರಿಯಲ್ಲಿ ಭೇಟಿಯಾದ ವೀರಪ್ಪಗೌಡರು ವಿಷಯವನ್ನು ಮುಂದಿಟ್ಟು "ನಮ್ಮ ಊರಲ್ಲಿ ಸಿಕ್ಕಾಪಟ್ಟೆ ಹುಚ್ಚುನಾಯಿಗಳ ಕಾಟ. ಇದಕ್ಕೆ ಒಂದು ಪರಿಹಾರ